**ದಿನಾಂಕ: 24-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ. ಕೆ ಎಲ್ ಎನ್ ವಕೀಲರಿಂದ ಆರೋಪಿ ಪರವಾಗಿಃ**

1) ನಾನು ಬಟ್ಟೆ ವ್ಯಾಪಾರ ಮತ್ತು ಟೈಲರಿಂಗ್ ಮಾಡುತ್ತೇನೆ. ನಾನು ಮನೆಯಲ್ಲಿ ಬಟ್ಟೆ ವ್ಯಾಪಾರ ಮತ್ತು ಹಳ್ಳಿಹಳ್ಳಿಗೂ ಹೋಗಿ ಬಟ್ಟೆ ವ್ಯಾಪಾರ ಮಾಡುತ್ತೇನೆ. ಮನೆಯಲ್ಲಿ ಬಟ್ಟೆ ವ್ಯಾಪಾರ ಮಾಡಲು ಪರವಾನಗಿ ಪಡೆದಿಲ್ಲ. ಕಳೆದ 17 ವರ್ಷದಿಂದ ಬಟ್ಟೆ ವ್ಯಾಪಾರ ಮಾಡುತ್ತೇನೆ. ನನ್ನ ಗಂಡ ತರಕಾರಿ ವ್ಯಾಪಾರ ಮಾಡುತ್ತಾರೆ. ನಾನು ಸಹ ಒಮ್ಮೊಮ್ಮೆ ಗಂಡನ ಜೊತೆ ತರಕಾರಿ ವ್ಯಾಪಾರ ಮಾಡಲು ಹೋಗುತ್ತೇನೆ.

2) ಬ್ಯಾಂಕಿನ ಮುಖಾಂತರ ವ್ಯವಹಾರ ಮಾಡುತ್ತೀರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಬ್ಯಾಂಕಿನಲ್ಲಿ ಸ್ವಲ್ಪ ಉಳಿತಾಯ ಮಾಡುತ್ತೇವೆ ಎಂದು ನುಡಿಯುತ್ತಾರೆ. ತಿಂಗಳಿಗೆ ಖರ್ಚೆಲ್ಲ ಕಳೆದ ಬಟ್ಟೆ ವ್ಯಾಪಾರದಿಂದ ಎರಡೂವರೆ ಲಕ್ಷ ಆದಾಯವಿರುತ್ತದೆ. ನಾನು ಆದಾಯ ತೆರಿಗೆ ಪಾವತಿದಾರಳಾಗಿರುವುದಿಲ್ಲ. ಆದಾಯವನ್ನು ಬ್ಯಾಂಕಿನಲ್ಲಿ ಇಡುತ್ತೇವೆ ಬೇಕಾದಾಗ ತೆಗೆದುಕೊಳ್ಳುತ್ತೇವೆ.

3) ಆರೋಪಿ ನನಗೆ 3-4 ವರ್ಷಗಳಿಂದ ಪರಿಚಯವಿರುತ್ತಾರೆ. ಸಾಕ್ಷಿ ಮುಂದುವರೆದು ನನ್ನ ಗಂಡನಿಗೆ ಆರೋಪಿ ಹಲವಾರು ವರ್ಷಗಳಿಂದ ಪರಿಚಯವಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ಮತ್ತು ನನ್ನ ಗಂಡ ಯಾವುದೇ ಹಣಕಾಸಿನ ವ್ಯವಹಾರ ಮಾಡಿರುವುದಿಲ್ಲ. ಆಗಾಗ ಆರೋಪಿಗೆ ಸ್ವಲ್ಪ ಸ್ವಲ್ಪ ಹಣ ಕೊಡುತ್ತಿದ್ದೆವು. ಮೊದಮೊದಲು 50 ಸಾವಿರ 1 ಲಕ್ಷ ಹಣ ಪಡೆದಿದ್ದರು. ಸದರಿ ಸಮಯದಲ್ಲಿ ಯಾವುದೇ ಬರವಣಿಗೆ ಮಾಡಿಕೊಂಡಿರುವುದಿಲ್ಲ.

4) ಹಣವನ್ನು ಆರೋಪಿಗೆ ಯಾವ ದಿನಾಂಕದಂದು ಕೊಟ್ಟಿರುತ್ತೀರಿ ಎಂದು ಪ್ರಶ್ನಿಸಲಾಗಿ ಸಾಕ್ಷಿ ದಿನಾಂಕ ನೆನಪಿಲ್ಲ ಆಗ ನನಗೆ ಉಶಾರಿರಲಿಲ್ಲ ಎಂದು ನುಡಿಯುತ್ತಾರೆ. ವಕೀಲರ ಮುಖಾಂತರ ನೀಡಿದ ನೋಟೀಸ್ ನಲ್ಲಿ ಯಾವ ದಿನಾಂಕದಂದು ಹಣ ಕೊಟ್ಟಿರುತ್ತೀರಾ ಎಂದು ಬರೆಸಿರುತ್ತೀರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಬರೆಸಿರುತ್ತೆನೆ ನೆನಪಿಲ್ಲ ಎಂದು ನುಡಿಯುತ್ತಾರೆ.

5) ನಾಲ್ಕುವರೆ ಲಕ್ಷ ಹಣ ಎಲ್ಲಿತ್ತು ಎಂದು ಪ್ರಶ್ನಿಸಲಾಗಿ ಸಾಕ್ಷಿ ಸ್ವಲ್ಪ ಹಣ ಬ್ಯಾಂಕಿನಿಂದ ಡ್ರಾ ಮಾಡಿದ್ದು, ಸ್ವಲ್ಪ ಹಣ ಮನೆಯಲ್ಲಿತ್ತು ಎಂದು ನುಡಿಯುತ್ತಾರೆ. ಕರ್ನಾಟಕ ಬ್ಯಾಂಕಿನಿಂದ ಡ್ರಾ ಮಾಡಿರುತ್ತೇನೆ. ಎಷ್ಟು ಹಣ ಡ್ರಾ ಮಾಡಿರುತ್ತೇನೆಂದು ನೆನಪಿರುವುದಿಲ್ಲ. ಆರೋಪಿ ಕೇಳಿದ ದಿನದಿಂದ ಒಂದು ವಾರ ಸಮಯ ಪಡೆದು ನಂತರ ಹಣ ಕೊಟ್ಟಿರುತ್ತೇನೆ. ಯಾವ ದಿನಾಂಕ ತಿಂಗಳು ಇಸವಿಯಲ್ಲಿ ಕೊಟ್ಟಿರುತ್ತೇನೆ ಎಂದು ನೆನಪಿರುವುದಿಲ್ಲ.

6) ಆರೋಪಿಗೆ ಹಣ ಕೊಟ್ಟಾಗ ನನ್ನ ಗಂಡ , ಆರೋಪಿ ಮತ್ತು ಆರೋಪಿಯ ಹೆಂಡತಿ ಮತ್ತು ನನ್ನ ಗಂಡನ ಸ್ನೇಹಿತ ಮಹೇಶ್ ಇದ್ದೆವು. ಯಾವ ಉದ್ದೇಶಕ್ಕೆ ಹಣ ಕೇಳಿದ್ದರು ಎಂದು ಪ್ರಶ್ನಿಸಲಾಗಿ ಸಾಕ್ಷಿ ಅವರು ಏನು ವ್ಯವಹಾರ ಮಾಡುತ್ತಿದ್ದರು ಏನು ಉದ್ದೇಶ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಯುಸ್ ಅಂಡ್ ಥ್ರೊ ಪ್ಲೇಟ್ ವ್ಯವಹಾರ ಮಾಡುತ್ತಿದ್ದರು.

7) ಬ್ಯಾಂಕಿನಿಂದ ಹಣ ಡ್ರಾ ಮಾಡಿದ ವಿಚಾರ ನನ್ನ ಗಂಡನಿಗೆ ಗೊತ್ತಿತ್ತು. ನಿಮ್ಮ ಗಂಡನೂ ಹಣ ಕೊಟ್ಟರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಇಬ್ಬರೂ ಉಳಿತಾಯ ಮಾಡಿ ಮನೆಯಲ್ಲಿ ಇಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ಗಂಡ ಎಷ್ಟು ಕೊಟ್ಟಿರುತ್ತಾರೆಂದು ನೆನಪಿರುವುದಿಲ್ಲ.

8) ಚೆಕ್ ಯಾವಾಗ ಕೊಟ್ಟರು ಎಂದು ನೆನಪಿರುವುದಿಲ್ಲ. ಚೆಕ್ ನ್ನು ಎಲ್ಲಿ ಬರೆದು ತಂದಿರುತ್ತಾರೆಂದು ಗೊತ್ತಿಲ್ಲ. ಆರೋಪಿ ನನ್ನ ಮುಂದೆ ಸಹಿ ಮಾಡಿ ಕೊಟ್ಟಿರುತ್ತಾರೆ. ಯಾವಾಗ ಸಹಿ ಹಾಕಿ ಕೊಟ್ಟಿರುತ್ತಾರೆ ಎಂದು ಪ್ರಶ್ನಿಸಲಾಗಿ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹಣ ಕೊಟ್ಟ ದಿನವೇ ಚೆಕ್ ನ್ನು ಕೊಟ್ಟಿರುತ್ತಾರೆ. ಚೆಕ್ ನ್ನು ಸ್ವಲ್ಪ ದಿನ ಬಿಟ್ಟು ಹಾಕಿ ಎಂದು ಹೇಳಿರುತ್ತಾರೆ. ಯಾವ ದಿನಾಂಕದಂದು ನೆನಪಿರುವುದಿಲ್ಲ.

9) ಆರೋಪಿ ನೋಟೀಸ್ ತಲುಪಿದ ದಿನದಂದು ಚೆಕ್ ಕಳುವು ಮಾಡಿ ಕೇಸ್ ಹಾಕಿರುತ್ತಾರೆಂದು ನಿಮ್ಮ ಮತ್ತು ನಿಮ್ಮ ಗಂಡನ ವಿರುದ್ದ ಬೇಲೂರು ಠಾಣೆಯಲ್ಲಿ ದೂರು ನೀಡಿದ್ದರು ಎಂದು ಸೂಚಿಸಲಾಗಿ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಠಾಣೆಗೆ ಕರೆದು

ವಿಚಾರಿಸಿದಾಗ ಠಾಣೆಯಲ್ಲಿ ನಾನು ಕೇಸ್ ಹಾಕುವುದಿಲ್ಲ ಚೆಕ್ ವಾಪಸ್ಸು ಕೊಡುತ್ತೇನೆಂದು ಹೇಳಿ ಪುನಃ ಠಾಣೆಗೆ ಹೊಗಲಿಲ್ಲ ಎನ್ನುವುದು ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಲಾಯಿತು. ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಎಂ ಎಸ್ ಶಶಿಕಲಾ)

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಬೇಲೂರು.